


ಎಡದಿಂದ ಬಲಕ್ಕೆ:

1. ಸರೋವರವನ್ನು ಕಂಡು ಬಂದದ್ದು ಅದೇ ವರ್ಷ (4)
3. ನೀರಿಗೆ ಮಹತ್ವ ನೀಡಿದರೆ ಕಾಯಿಲೆ ಇಲ್ಲ (3)
4. ಕಾಣಿಕೆಯ ಆಸೆ ಅತ್ಯಲ್ಪ ಕಾಲದ್ದು (3)
6. ತಿಗಣೆಯ ಜೊತೆ ಜೊತೆಗೇ ಸುತ್ತಿ ಸುತ್ತಿ ಬರುವ ಸಾಧನ (4)
7. ಈ ಪರಿಯ ಕೆಲಸಕ್ಕೆ ಕಸ ತೆಗೆವ ಸಾಧನವೇ ಬೇಕು (3)
9. ತುಂಡಾಗಿಸುವುದು ಏಕೆ? ಸುಮ್ಮನೇ ಹೊಡಿ, ಸಾಕು (3)
11. ನಾಳೆಯವರೆಗೂ ನೋವಿನ ದನಿ ಮಾಡು (3)
13. ಕಿವಿಯಂತೆಯೇ ತೋರುವ ಅಂಗ, ಮೀನಿನದು (3)
15. ಹುಡುಗರನ್ನೆಲ್ಲ ಕಳಿಸು, ಪತ್ತೆಮಾಡಿಸು (4)
17. ತಣ್ಣೀರಿನ ಜೊತೆ ಜೊತೆಗೇ ತಂದದ್ದು ಇದೇ ಚಿಗುರು (3)
18. ಮುನ್ನಾದಿನ ಕಲಿತದ್ದನ್ನೆಲ್ಲ ಮತ್ತೆ ಮತ್ತೆ ಅಭ್ಯಾಸ (3)
19. ಪುತ್ತೂರಿನ ಈ ಪದ್ಧತಿ ಬಹಳ ಹಿಂದಿನ ಕಾಲದ್ದು (4)

ಮೇಲಿಂದ ಕೆಳಕ್ಕೆ:

1. ಅವನ ಸಂಗಾತಿಯ ಬಗೆಗೆ ಹೀಗೊಂದು ಸಮಾಚಾರ (3)
2. ಆ ಅರಣ್ಯದ ಕ್ಷೇಮಕ್ಕಾಗಿ ಭಾರೀ ಕಾವಲು (3)
3. ಅದು ನಿರಾಧಾರ ಸುದ್ದಿ ಎಂದೇ ತೀರ್ಮಾನ (3)
5. ಕಾರಿನಡಿ ನುಗ್ಗಿದ್ದು ಅದೇ ಕಂಬಳಿ ಹೊದ್ದ ಪ್ರಾಣಿ (3)
7. ವಿಪಿನವನ್ನು ಹೊಕ್ಕು ಬೀಸಿದ ಗಾಳಿ (3)
8. ಕೊರಳು ಹಿಡಿಯಬಂದರೆ ಕೋಪಿಸಿಕೋ, ರೇಗು (3)
9. ನದೀ ತಟಾಕದಲ್ಲಿ ಪ್ರಸಿದ್ಧ ರಕ್ಕಸಿ (3)
10. ಮೂರು ತಾಸು–ಸ್ವಲ್ಪ ಹೆಚ್ಚು ಕಡಿಮೆ (3)
12. ಕಿರಾತನದೂ ಅದೇ ನೆತ್ತರು (3)
14. ವಾದ್ಯವನ್ನ ಕಲಿಯಲೂ ಒಂದು ಕ್ರಮ ಇದೆ (3)
15. ಪಹರೆ ಕೆಲಸ ಎಂದರೆ ಅವನಿಗೆ ತುಂಬ ಉತ್ಸಾಹ (3)
16. ಮನಸು ಹೂವಿನಂತೆ–ಅದೇ ಹೆಸರು (3)

## ಪದಬಂಧ: 10-6-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭಿಮತ; 3. ಸಲ್ಲಾಪ; 4. ರಾಜಿಸು; 6. ಕರಭಾರ; 7. ರಿಣಭಯ; 9. ತಿರುಮಲ; 12. ಅಭಿಮಾನ; 14. ಮುರಿತ; 15. ಕಾವಲು; 16. ರತ್ನಾಕರ.

ಮೇಲಿಂದ ಕೆಳಕ್ಕೆ:

1. ಅಪಸ್ವರ; 2. ತರಾವರಿ; 3. ಸತ್ಕಾರ; 5. ಸುಲಭ; 6. ಕರಾಮತಿ; 8. ಯಕ್ಷಗಾನ; 10. ರುಸುಮು; 11. ಲಕ್ಷಾಂತರ; 12. ಅಹಂಕಾರ; 13. ಮಾಸಲು.

# ಶಕ್ತಿ ವಿಶೇಷ

## 'ಸೌರಶಕ್ತಿ' ಏನು ವಿಶೇಷ?

ನಮ್ಮ ಸೂರ್ಯನಿಂದ ಹೊಮ್ಮಿ ಹರಿಯುತ್ತಿರುವ ಶಕ್ತಿಯೇ ಸೌರಶಕ್ತಿ. ಸೂರ್ಯನಿಂದ ಬಹುಬಗೆಯ ವಿದ್ಯುತ್ಕಾಂತೀಯ ವಿಕಿರಣ ರೂಪದಲ್ಲಿ ಶಕ್ತಿ ನಿರಂತರ ಉಕ್ಕುತ್ತಿದೆ. ಅವುಗಳ ಪೈಕಿ 'ಅವಗೆಂಪು ವಿಕಿರಣ' ಮತ್ತು 'ದೃಗ್ಗೋಚರ ಬೆಳಕು' ಭೂಮಿಗೆ ಶಾಖ ಮತ್ತು ಬೆಳಕನ್ನು ಒದಗಿಸುತ್ತಿವೆ. ಈ ವಿಕಿರಣಗಳು ನಮ್ಮ ದೃಷ್ಟಿಗೆ ಬೆಳಕಾಗಿ, ಸಸ್ಯಗಳು ಆಹಾರ ತಯಾರಿಸಲು ಆಕರವಾಗಿ, ಧರೆಯನ್ನು ಬೆಚ್ಚಗಿಡಲು ಆಧಾರವಾಗಿವೆ. ಹೀಗೆ ಭೂ ಸ್ವಾಸ್ಥ್ಯಕ್ಕೆ, ಜೀವಲೋಕದ ಅಸ್ತಿತ್ವಕ್ಕೆ ಮೂಲ ಆಧಾರವಾಗಿರುವ ಸೂರ್ಯ ಮೂಲ ವಿಕಿರಣ ವಿಧಗಳನ್ನೇ– ಎಂದರೆ ಸೂರ್ಯನ ಬೆಳಕು ಮತ್ತು ಶಾಖ ಶಕ್ತಿಗಳನ್ನೇ– ಒಟ್ಟಾಗಿ ಸೌರಶಕ್ತಿ ಎಂದು ಕರೆಯಲಾಗುತ್ತಿದೆ.

ಸೌರಶಕ್ತಿ ಒಂದು ಬಗೆಯ ಅಕ್ಷಯ ಶಕ್ತಿ. ಎಂದರೆ ಎಷ್ಟೇ ಬಳಸಿದರೂ, ಎಷ್ಟು ಕಾಲ ಬಳಸಿದರೂ ಈ ಶಕ್ತಿ ಮುಗಿಯುವುದಿಲ್ಲ; ಕಿಂಚಿತ್ತೂ ಕಡಿಮೆಯೂ ಆಗುವುದಿಲ್ಲ. ಸೌರಶಕ್ತಿಯಂತೆಯೇ ಧರೆಯಲ್ಲಿ ಇನ್ನೂ ಕೆಲ ಅಕ್ಷಯ ಶಕ್ತಿಗಳು ಲಭ್ಯ ಇವೆ: 'ಬೀಸುವ ಗಾಳಿ (ಮಾರುತ ಶಕ್ತಿ), ಹರಿವ–ಧುಮುಕುವ ನೀರು (ಜಲಶಕ್ತಿ), ಕಡಲಿನ ಅಲೆಗಳು (ಭರತ ಶಕ್ತಿ), ಭೂ ಅಂತರಾಳದ ಶಾಖ ಇತ್ಯಾದಿ.' ಆದರೆ ಸೌರಶಕ್ತಿಯಷ್ಟು ಧಾರಾಳವಾಗಿ,



ಅದರಷ್ಟು ಸಾರ್ವತ್ರಿಕವಾಗಿ ಒದಗುವ ಅಕ್ಷಯ ಶಕ್ತಿ ಯಾವುದೂ ಇಲ್ಲ. ಸೌರಶಕ್ತಿಯ ಮೊದಲಿನ ಮತ್ತು ಪ್ರಧಾನ ವೈಶಿಷ್ಟ್ಯ ಇದೇ.

ಧರೆಯ ಎಲ್ಲೆಡೆ–ನೆಲ, ಕಡಲು ಮತ್ತು ಆಕಾಶದಲ್ಲಿ ಕೂಡ–ಲಭ್ಯ ಇರುವ ಸೌರಶಕ್ತಿಯ ಧಾರಾಳ ಪ್ರಮಾಣ ಕಲ್ಪನಾತೀತ. ಸೂರ್ಯನಿಂದ ಭೂಮಿಗೆ ಬರುತ್ತಿರುವ ದ್ಯುತಿ ಶಕ್ತಿಯನ್ನು ಅಳೆದರೆ ಅದು ಸುಮಾರು ಎರಡು ದಶಲಕ್ಷ ಮೆಗಾವ್ಯಾಟ್ ವಿದ್ಯುತ್ ಶಕ್ತಿಯಷ್ಟಾಗುತ್ತದೆ! ಅದರ ನೂರರ ಒಂದೇ ಅಂಶ ಇಡೀ ಜಗತ್ತಿನ ಎಲ್ಲ ಜನರ ಎಲ್ಲ ಅಗತ್ಯಗಳಿಗೂ ಸಾಕು! ಅಷ್ಟೇ ಅಲ್ಲ, ಪ್ರತಿ ಸೆಕೆಂಡ್‌ನಲ್ಲೂ ಭೂ ನೆಲವನ್ನು ತಲುಪುತ್ತಿರುವ ಶಾಖ ಐದು ದಶಲಕ್ಷ ಟನ್ ಕಲ್ಲಿದ್ದಿಲು ಒದಗಿಸುವ ಶಾಖ ಶಕ್ತಿಗೆ ಸಮ. ನಮ್ಮದೊಂದೇ ದೇಶದ ಕೇವಲ ರಸ್ತೆಗಳ ಮೇಲಷ್ಟೇ ಬೀಳುವ ಬಿಸಿಲು ಇಡೀ ಜಗತ್ತಿನಲ್ಲಿ ಬಳಕೆಗೊಳ್ಳುತ್ತಿರುವ ಒಟ್ಟೂ ತೈಲ–ಕಲ್ಲಿದ್ದಿಲುಗಳಿಗಿಂತ ಹೆಚ್ಚು ಶಕ್ತಿಯನ್ನೊದಗಿಸಬಲ್ಲದು.

ಸೌರಶಕ್ತಿ ಸಂಪೂರ್ಣ ಮಾಲಿನ್ಯರಹಿತ ಕೂಡ. ಸೌರಶಕ್ತಿಯನ್ನು ಬಳಸುವಾಗ ಹೊಗೆ, ಬೂದಿ ಇನ್ನಾವುದೇ ಮಲಿನ ವಸ್ತು ಉತ್ಪತ್ತಿಯಾಗುವುದಿಲ್ಲ. ಸೌರಶಕ್ತಿಗಾಗಿ ಗಣಿ ತೋಡಬೇಕಿಲ್ಲ, ಬಾವಿ ಕೊರೆಯಬೇಕಿಲ್ಲ, ಅಡವಿಗಳನ್ನು ಕಡಿಯಬೇಕಿಲ್ಲ, ಅಣೆಕಟ್ಟು ಕಟ್ಟಬೇಕಿಲ್ಲ, ಊರು–ಕೇರಿ ಮುಳುಗಿಸಬೇಕಿಲ್ಲ.

ಎಂಥ ಶಕ್ತಿ! ಅಲ್ಲವೇ?

■ ಎನ್. ವಾಸುದೇವ್